ಕರ್ನಾಟಕ ಸರ್ಕಾರ

**ಅಕ್ಟೋಬರ್ 26, 2016**

## ಹಿರಿಯ ಪತ್ರಕರ್ತ ಎಂ. ಬಿ. ಸಿಂಗ್ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ



**ಬೆಂಗಳೂರು, ಅಕ್ಟೋಬರ್ 26:**

ಕನ್ನಡ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಎಂ. ಬಿ. ಸಿಂಗ್ ಎಂದೇ ಜನಪ್ರಿಯರಾಗಿದ್ದ ಹಿರಿಯ ಪತ್ರಕರ್ತ ಮದನ್ ಭುವನ್ ಸಿಂಗ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ತಮ್ಮ ಪತ್ರಿಕೋದ್ಯಮ ವೃತ್ತಿಯನ್ನು ಪ್ರಾರಂಭಿಸಿದ ಎಂ. ಬಿ. ಸಿಂಗ್ ಅವರು ತಮ್ಮ ವಯೋವೃತ್ತಿಯ ಸಂದರ್ಭದಲ್ಲಿ ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್‌ನ ಹೆಮ್ಮೆಯ ಪ್ರಕಟಣೆಗಳಾದ ಪ್ರಜಾವಾಣಿ, ಸುಧಾ ಹಾಗೂ ಮಯೂರ ಪತ್ರಿಕೆಗಳ ಸಂಪಾದಕರಾಗಿ ಏಕಕಾಲಕ್ಕೆ ಕಾರ್ಯನಿರ್ವಹಿಸಿದ ಕೀರ್ತಿ ಹಾಗೂ ಗೌರವಕ್ಕೆ ಪಾತ್ರರಾಗಿದ್ದರು.

ಕರ್ತವ್ಯ ಮುಗಿಸಿ ತಡರಾತ್ರಿ ಮನೆಗೆ ಸೇರುತ್ತಿದ್ದ ಹಿನ್ನೆಲೆಯಲ್ಲಿ ಬೆಳಗಿನ ಪತ್ರಿಕೆ ಸಂಪಾದಕರೆಲ್ಲರೂ ಪತ್ರಿಕಾಲಯಕ್ಕೆ ಮಧ್ಯಾಹ್ನವೇ ಬರುವುದು ವಾಡಿಕೆ. ಆದರೆ, ನಡುರಾತ್ರಿ ಮನೆಗೆ ತೆರಳಿದರೂ ಮರುದಿನ ಬೆಳಿಗ್ಗೆಯೇ ಕರ್ತವ್ಯಕ್ಕೆ ಹಾಜರಾಗುತ್ತಿದ್ದದ್ದು ಎಂ. ಬಿ. ಸಿಂಗ್ ಅವರ ವಿಶೇಷವಾಗಿತ್ತು. ತಾವೆಂದೂ ಗಡಿಯಾರವನ್ನು ನೋಡಿ ಕೆಲಸ ಮಾಡುವುದಿಲ್ಲ ಎಂಬುದು

ಎಂ. ಬಿ. ಸಿಂಗ್ ಅವರ ದೃಢ ಮಾತು, ಉದಯೋನ್ಮುಖ ಪತ್ರಕರ್ತರಿಗೆ ಪ್ರೇರಣೆ ಹಾಗೂ ಸ್ಫೂರ್ತಿಯಾಗಿತ್ತು ಎಂದು ಮುಖ್ಯಮಂತ್ರಿ ಅವರು ಬಣ್ಣಿಸಿದ್ದಾರೆ.

ಎಂ. ಬಿ. ಸಿಂಗ್ ಅವರ ಬತ್ತಳಿಕೆಯಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಟೀಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ, ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ ಹಾಗೂ ಖಾದ್ರಿ ಶಾಮಣ್ಣ ಪ್ರಶಸ್ತಿ ಹೀಗೆ ಎಲ್ಲಾ ಪ್ರಮುಖ ಪ್ರಶಸ್ತಿಗಳೂ ಮನೆ ಮಾಡಿಕೊಂಡಿರುವುದು ಅವರ ಪ್ರತಿಭೆಗೆ ಸಾಕ್ಷಿ. ಕನ್ನಡ ಪತ್ರಿಕಾ ರಂಗದ ಅಭ್ಯುದಯಕ್ಕೆ ಎಂ. ಬಿ. ಸಿಂಗ್ ಅವರು ನೀಡಿದ ವರದಿಯು ಸಣ್ಣ ಮತ್ತು ಮಧ್ಯಮ ಪ್ರಮಾಣದ ಪತ್ರಿಕೆಗಳ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಪ್ರೋತ್ಸಾಹದಾಯಕ ವಾತಾವರಣವನ್ನು ಸೃಷ್ಟಿಸಿತ್ತು ಎಂಬುದು ಇದೀಗ ಇತಿಹಾಸ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*******

ಡಿ ಪಿ ಎಂ